**File No.AGRI-AML/109/2020-AGRI_PLAN_A-AGRICULTURE-Part(1)**

**ಕರ್ನಾಟಕ ಸರ್ಕಾರದ ನಡವಳಿಗಳು.**

ವಿಷಯ: ಜಲಾನಯನ ಅಭಿವೃದ್ಧಿ ಇಲಾಖೆಯ 2020-21 ನೇ ಸಾಲಿನ ರಾಜ್ಯವಲಯ ಯೋಜನೆಗಳಿಗೆ ಎರಡನೇ ತ್ರೈಮಾಸಿಕ ಅನುದಾನ ಬಿಡುಗಡೆ ಮಾಡುವ ಬಗ್ಗೆ.

**ಓದಲಾಗಿದೆ:**

1. ಸರ್ಕಾರದ ಆದೇಶ ಸಂಖ್ಯೆ:AGRI-AML-91/2020, ದಿನಾಂಕ :02-06-2020 ಮತ್ತು ಸೇರ್ಪಡೆ ಆದೇಶ ದಿನಾಂಕ: 16-06-2020.
2. ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಆಇ 02 ಟಿ.ಎಫ್.ಪಿ 2020, ದಿನಾಂಕ: 30-05-2020.
3. ಸರ್ಕಾರದ ಆದೇಶ ಸಂಖ್ಯೆ: AGRI-AML-109/2020(P-1), ದಿನಾಂಕ:03.07.2020.
4. ಸರ್ಕಾರದ ಆದೇಶ ಸಂಖ್ಯೆ: AGRI-AML-109/2020(P-1), ದಿನಾಂಕ:14.08.2020.
5. ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ ಇವರ ಪತ್ರ ಸಂಖ್ಯೆ: ಜಅಇ/ಲೆಕ್ಕ-5/ತ್ರೈಮಾಅಬಿ /2020-21, ದಿನಾಂಕ: 08-09-2020.

**ಪ್ರಸ್ತಾವನೆ:**

ಮೇಲೆ ಕ್ರಮಾಂಕ (1) ರಲ್ಲಿ ಓದಲಾದ ಸರ್ಕಾರದ ಆದೇಶಗಳಲ್ಲಿ 2019-20ನೇ ಸಾಲಿನಲ್ಲಿ ಕೃಷಿ ಇಲಾಖೆಯ ಚಾಲ್ತಿಯಲ್ಲಿದ್ದ ಯೋಜನೆಗಳನ್ನು 2020-21ನೇ ಸಾಲಿನಲ್ಲಿ ಮುಂದುವರೆಸಲು ಸರ್ಕಾರದ ಮಂಜೂರಾತಿ ನೀಡಲಾಗಿದೆ.

ಮೇಲೆ ಕ್ರಮಾಂಕ (2)ರಲ್ಲಿ ಓದಲಾದ ಆದೇಶದಲ್ಲಿ ಆರ್ಥಿಕ ಇಲಾಖೆಯು 2020-21 ನೇ ಸಾಲಿನಲ್ಲಿ ಜೂನ್ ರಿಂದ ನವೆಂಬರ್ ವರೆಗೆ 6 ತಿಂಗಳಿಗೆ ಹಣ ಬಿಡುಗಡೆ ಮಾಡಲು ಆರ್ಥಿಕ ಅಧಿಕಾರ ಪ್ರತ್ಯಾಯೋಜನೆ ಮಾಡಲಾಗಿದೆ.

ಮೇಲೆ ಕ್ರಮಾಂಕ (3)ರಲ್ಲಿ ಓದಲಾದ ಆದೇಶದಲ್ಲಿ 2020-21ನೇ ಸಾಲಿನಲ್ಲಿ ಜಲಾನಯನ ಅಭಿವೃದ್ಧಿ ಇಲಾಖೆಯ ಮುಂದುವರೆಸಲಾದ ರಾಜ್ಯವಲಯ ಯೋಜನೆಗಳಿಗೆ ಮೊದಲನೇ ತ್ರೈಮಾಸಿಕಕ್ಕೆ ಒಟ್ಟು ರೂ.476.750 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲು ಮಂಜೂರಾತಿಯನ್ನು ನೀಡಲಾಗಿದೆ.

ಮೇಲೆ ಕ್ರಮಾಂಕ (4)ರಲ್ಲಿ ಓದಲಾದ ಆದೇಶದಲ್ಲಿ 2020-21ನೇ ಸಾಲಿನಲ್ಲಿ ಸುಜಲ-III ಎಕ್ಸಿಟ್ ಸ್ಟ್ರಾಟಜಿ ಯೋಜನೆಯ ಲೆಕ್ಕ ಶೀರ್ಷಿಕೆ 2402-00-102-0-31 ಅಡಿ ಮೊದಲ ತ್ರೈಮಾಸಿಕ ಕಂತಿನ ಅನುದಾನವಾಗಿ ರೂ.246.50 ಲಕ್ಷಗಳ (ಉಪ ಲೆಕ್ಕ ಶೀರ್ಷಿಕೆ 103-ರಡಿ ರೂ.79.25 ಲಕ್ಷ, 051-ರಡಿ ರೂ.167.25 ಲಕ್ಷ) ಅನುದಾನವನ್ನು ಬಿಡುಗಡೆ ಮಾಡಲು ಮಂಜೂರಾತಿಯನ್ನು ನೀಡಲಾಗಿದೆ.

ಮೇಲೆ ಕ್ರಮಾಂಕ (5)ರಲ್ಲಿ ಓದಲಾದ ಪ್ರಸ್ತಾವನೆಯಲ್ಲಿ ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ ಇವರು 2020-21ನೇ ಸಾಲಿನ ಚಾಲ್ತಿ ಯೋಜನೆಗಳಿಗೆ ಭೂಸಾರ ಮತ್ತು ಜಲ ಸಂರಕ್ಷಣೆ-ಜಲಾನಯನ ಅಭಿವೃದ್ಧಿ ನಿರ್ದೇಶನಾಲಯ, (2402-00-102-0-15), ಕರ್ನಾಟಕ ಜಲಾನಯನ ತರಬೇತಿ ಕೇಂದ್ರಗಳು (2402-00-109-0-02), ಜಲಾನಯನ ಅಭಿವೃದ್ಧಿ ಮೂಲಕ ಬರಗಾಲ ತಡೆಯುವಿಕೆ (4402-00-102-0-05) ಮತ್ತು ಎಗ್ಸಿಟ್ ಸ್ಟ್ರಾಟೆಜಿ ಅಡಿ ಅನುಮೋದನೆ ಕಾರ್ಯಕ್ರಮಗಳು (2402-00-102-0-31) ಸೇರಿ ಒಟ್ಟು ಮೊತ್ತ ರೂ.1975.25 ಲಕ್ಷಗಳ ಅನುದಾನ ಬಿಡುಗಡೆ ಮಾಡುವಂತೆ ಕೋರಿರುತ್ತಾರೆ.

ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ ಇವರು ಸಲ್ಲಿಸಿರುವ ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆಯ ದಿನಾಂಕ:30-05-2020 ರ ಅಧಿಕಾರ ಪ್ರತ್ಯಾಯೋಜಿಸಿರುವ ಆದೇಶ ಮತ್ತು ಪರಿಷ್ಕೃತ ಆಯವ್ಯಯದ(RE) ಅನಧಿಕೃತ ಟಿಪ್ಪಣಿಗಳನ್ವಯ ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, ಸುಜಲ-3 ಎಗ್ಸಿಟ್ ಸ್ಟ್ರಾಟೆಜಿ ಅಡಿ ಅನುಮೋದಿತ ಕಾರ್ಯಕ್ರಮಗಳು ಅಡಿಯಲ್ಲಿ ಉ.ಶೀ 051 ರಲ್ಲಿ 17.54% ವೆಚ್ಚವಾಗಿರುವುದರಿಂದ ಈ ಕಾರ್ಯಕ್ರಮವನ್ನು ಹೊರತುಪಡಿಸಿ

**File No.AGRI-AML/109/2020-AGRI_PLAN_A-AGRICULTURE-Part(1)**

ಉಳಿದ ಯೋಜನೆಗಳಿಗೆ ಎರಡನೇ ತ್ರೈಮಾಸಿಕಕ್ಕೆ ಅನುದಾನ ಬಿಡುಗಡೆ ಮಾಡಲು ತೀರ್ಮಾನಿಸಿದೆ. ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: AGRI-AML-109/2020(P-1) ಬೆಂಗಳೂರು, ದಿನಾಂಕ: 14.10.2020.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, 2020-21ನೇ ಸಾಲಿನಲ್ಲಿ ಜಲಾನಯನ ಅಭಿವೃದ್ಧಿ ಇಲಾಖೆಯ ಮುಂದುವರೆಸಲಾದ ಈ ಕೆಳಕಂಡ ರಾಜ್ಯವಲಯ ಯೋಜನೆಗಳಿಗೆ ಎರಡನೇ ತ್ರೈಮಾಸಿಕಕ್ಕೆ ಒಟ್ಟು ರೂ.556.00 ಲಕ್ಷ (ಐದು ನೂರಾ ಐವತ್ತಾರು ಲಕ್ಷ ರೂಪಾಯಿಗಳು ಮಾತ್ರ) ಗಳ ಅನುದಾನವನ್ನು ಕೆಳಕಂಡ ಷರತ್ತಿಗೊಳಪಟ್ಟು ಬಿಡುಗಡೆ ಮಾಡಲು ಮಂಜೂರಾತಿಯನ್ನು ನೀಡಲಾಗಿದೆ.

| ಜಲಾನಯನ ಅಭಿವೃದ್ಧಿ ಇಲಾಖೆ (ರೂ.ಲಕ್ಷಗಳಲ್ಲಿ) | | | | | |
|---|---|---|---|---|---|
| 1 | ಭೂಸಾರ ಮತ್ತು ಜಲ ಸಂರಕ್ಷಣೆ ಜಲಾನಯನ ಅಭಿವೃದ್ಧಿ ಇಲಾಖೆ ಜಲಾನಯನ ನಿರ್ದೇಶನಾಲಯ 2402-00-102-0-15 | | | | |
| | ಉಪ ಲೆಕ್ಕ ಶೀರ್ಷಿಕೆ | ಕಾರ್ಯಕ್ರಮದ ವಿವರ | ಆಯವ್ಯಯ ದನ್ವಯ ಅನುದಾನ | ಈಗಾಗಲೇ ಬಿಡುಗಡೆಯಾಗಿರುವ ಅನುದಾನ | ಎರಡನೇ ತ್ರೈಮಾಸಿಕ ಕಂತಿನಲ್ಲಿ ಬಿಡುಗಡೆ ಮಾಡಿದ ಅನುದಾನ |
| | 002 | ವೇತನ-ಅಧಿಕಾರಿಗಳು | 464.00 | 231.996 | 116.00 |
| | 003 | ವೇತನ-ಸಿಬ್ಬಂದಿ | 569.00 | 284.496 | 142.25 |
| | 011 | ತುಟ್ಟಿ ಭತ್ಯೆ | 250.00 | 125.004 | 62.50 |
| | 014 | ಇತರೆ ಭತ್ಯೆ | 165.00 | 82.498 | 41.25 |
| | 020 | ವೈದ್ಯಕೀಯ ಭತ್ಯೆ | 3.00 | 1.499 | 0.75 |
| | 021 | ವೈದ್ಯಕೀಯ ವೆಚ್ಚದ ಮರುಪಾವತಿ | 15.00 | 3.750 | 3.75 |
| | 033 | ದಿನಗೂಲಿ | 23.00 | 9.583 | 5.75 |
| | 041 | ಪ್ರಯಾಣ ವೆಚ್ಚ | 20.00 | 8.332 | 5.00 |
| | 051 | ಸಾಮಾನ್ಯ ವೆಚ್ಚಗಳು | 80.00 | 33.333 | 20.00 |
| | 052 | ದೂರವಾಣಿ ವೆಚ್ಚಗಳು | 6.00 | 2.499 | 1.50 |
| | 071 | ಕಟ್ಟಡ ವೆಚ್ಚ | 138.00 | 57.499 | 34.50 |
| | 180 | ಯಂತ್ರೋಪಕರಣಗಳು & ಸಾಧನ ಸಾಮಗ್ರಿಗಳು | 2.00 | 0.500 | 0.50 |
| | 195 | ಸಾರಿಗೆ ವೆಚ್ಚ | 27.00 | 11.249 | 6.75 |
| | | ಒಟ್ಟು | **1762.00** | **852.238** | **440.50** |

**File No.AGRI-AML/109/2020-AGRI_PLAN_A-AGRICULTURE-Part(1)**

| | | | | | |
|---|---|---|---|---|---|
| **2** | ಕರ್ನಾಟಕ ಜಲಾನಯನ ತರಬೇತಿ ಕೇಂದ್ರಗಳು 2402-00-109-0-02 | | | | |
| | 002 | ವೇತನ-ಅಧಿಕಾರಿಗಳು | 53.00 | 26.499 | 13.25 |
| | 003 | ವೇತನ-ಸಿಬ್ಬಂದಿ | 26.00 | 12.999 | 6.50 |
| | 011 | ತುಟ್ಟಿ ಭತ್ಯೆ | 19.00 | 9.499 | 4.75 |
| | 014 | ಇತರೆ ಭತ್ಯೆ | 10.00 | 4.999 | 2.50 |
| | 020 | ವೈದ್ಯಕೀಯ ಭತ್ಯೆ | 1.00 | 0.499 | 0.25 |
| | 021 | ವೈದ್ಯಕೀಯ ವೆಚ್ಚದ ಮರುಪಾವತಿ | 9.00 | 2.250 | 2.25 |
| | 041 | ಪ್ರಯಾಣ ವೆಚ್ಚ | 1.00 | 0.416 | 0.25 |
| | 051 | ಸಾಮಾನ್ಯ ವೆಚ್ಚಗಳು | 8.00 | 3.333 | 2.00 |
| | 052 | ದೂರವಾಣಿ ವೆಚ್ಚಗಳು | 1.00 | 0.416 | 0.25 |
| | 071 | ಕಟ್ಟಡ ವೆಚ್ಚ | 7.00 | 2.916 | 1.75 |
| | 180 | ಯಂತ್ರೋಪಕರಣಗಳು & ಸಾಧನ ಸಾಮಗ್ರಿಗಳು | 1.00 | 0.250 | 0.25 |
| | 195 | ಸಾರಿಗೆ ವೆಚ್ಚ | 9.00 | 3.749 | 2.25 |
| | | ಒಟ್ಟು | **145.00** | **67.825** | **36.25** |
| **3** | ಎಗ್ಸಿಟ್ ಸ್ಟ್ರಾಟೆಜಿ ಅಡಿ ಅನುಮೋದನೆ ಕಾರ್ಯಕ್ರಮಗಳು - 2402-00-102-0-31 | | | | |
| | 103 | ಸಹಾಯಾನುದಾನ ಸಾಮಾನ್ಯ | 317.00 | 79.25 | 79.25 |
| | | | **317.00** | **79.25** | **79.25** |
| | | ಒಟ್ಟು ಮೊತ್ತ | **2224.00** | **999.32** | **556.00** |

ಷರತ್ತುಗಳು:

1. ಎರಡನೇ ತ್ರೈಮಾಸಿಕಕ್ಕೆ ಬಿಡುಗಡೆ ಮಾಡಿದ ಅನುದಾನದಲ್ಲಿ, ವೆಚ್ಚವನ್ನು ಭರಿಸಲು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಆಇ 02 ಟಿ.ಎಫ್.ಪಿ 2020, ದಿನಾಂಕ: 30-05-2020 ರನ್ವಯ ಕ್ರಮವಹಿಸತಕ್ಕದ್ದು.

2. 2020-21ನೇ ಸಾಲಿನ ಮೂರನೇ ತ್ರೈಮಾಸಿಕಕ್ಕೆ ಅನುದಾನ ಬಿಡುಗಡೆಗೆ ಸರ್ಕಾರದ ಆದೇಶ ಸಂಖ್ಯೆ: ಆಇ 02 ಟಿ.ಎಫ್.ಪಿ 2020, ದಿನಾಂಕ: 30-05-2020 ರಲ್ಲಿ ನೀಡಿರುವ ಮಾರ್ಗಸೂಚಿಯನ್ವಯ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಆಇ 02 ಟಿ.ಎಫ್.ಪಿ 2020, ದಿನಾಂಕ:

**File No.AGRI-AML/109/2020-AGRI_PLAN_A-AGRICULTURE-Part(1)**

30-05-2020 ರ ಆದೇಶದಲ್ಲಿ ಸರ್ಕಾರದ ಕಾರ್ಯದರ್ಶಿಗಳಿಗೆ ನೀಡಲಾಗಿರುವ ಆರ್ಥಿಕ ಅಧಿಕಾರದ ಮೇರೆಗೆ ಹಾಗೂ ಅನಧಿಕೃತ ಟಿಪ್ಪಣಿ ಸಂಖ್ಯೆ:ಆಇ 172 ವೆಚ್ಚ-4/2020, ದಿನಾಂಕ: 30-05-2020 ರಲ್ಲಿ ಆರ್ಥಿಕ ಇಲಾಖೆ ಹಾಗೂ ಟಿಪ್ಪಣಿ ಸಂಖ್ಯೆ: ಅಗ್ರಿ 74 ಐಎಫ್.ಎ 2020, ದಿನಾಂಕ: 12.10.2020 ರಲ್ಲಿ ಆಂತರಿಕ ಆರ್ಥಿಕ ಸಲಹೆಗಾರರು ನೀಡಿರುವ ಸಹಮತಿ ಮೇರೆಗೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

P. Sath 14/10/2020

(ಪಿ.ಸತ್ಯಭಾಮ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ (ಯೋಜನೆ)

ಪ್ರತಿಯನ್ನು:-

1. ಪ್ರಧಾನ ಮಹಾಲೇಖಪಾಲರು, (ಜಿ & ಎಸ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, "ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂ: 5398, ಬೆಂಗಳೂರು-01.
2. ಪ್ರಧಾನ ಮಹಾಲೇಖಪಾಲರು, (ಇ & ಆರ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, "ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂ: 5398, ಬೆಂಗಳೂರು-01.
3. ಮಹಾಲೇಖಪಾಲರು (ಎ ಮತ್ತು ಇ) ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂ: 5329, ಬೆಂಗಳೂರು-01.
4. ಕೃಷಿ ಆಯುಕ್ತರು/ಕೃಷಿ ನಿರ್ದೇಶಕರು, ಕೃಷಿ ಇಲಾಖೆ, ಬೆಂಗಳೂರು
5. ಆಯುಕ್ತರು/ನಿರ್ದೇಶಕರು, ಜಲಾನಯನ ಅಭಿವೃದ್ಧಿ ಇಲಾಖೆ, ಬೆಂಗಳೂರು
6. ನಿರ್ದೇಶಕರು, ಪರಿಯೋಜನಾ ರಚನಾ ವಿಭಾಗ, ಯೋಜನಾ ವಿಭಾಗ, ಬೆಂಗಳೂರು.
7. ಸರ್ಕಾರದ ಉಪ ಕಾರ್ಯದರ್ಶಿ-1, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು
8. ಆಂತರಿಕ ಆರ್ಥಿಕ ಸಲಹೆಗಾರರು, ಕೃಷಿ ಮತ್ತು ತೋಟಗಾರಿಕೆ ಇಲಾಖೆ, ಬೆಂಗಳೂರು
9. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ, (ವೆಚ್ಚ-4), ವಿಧಾನ ಸೌಧ, ಬೆಂಗಳೂರು.
10. ನಿರ್ದೇಶಕರು, ಖಜಾನೆ ಇಲಾಖೆ, ವಿಶ್ವೇಶ್ವರಯ್ಯ ಕೇಂದ್ರ, ಬೆಂಗಳೂರು.
11. ಜಂಟಿ ನಿರ್ದೇಶಕರು, ಹುಜೂರು ಖಜಾನೆ, ಬೆಂಗಳೂರು.
12. ಉಪ ನಿರ್ದೇಶಕರು, ಟಿ.ಎನ್.ಎಂ.ಸಿ, ಖನಿಜ ಭವನ, ಬೆಂಗಳೂರು
13. ಎಲ್ಲಾ ಜಿಲ್ಲೆಯ ಜಿಲ್ಲಾ ಖಜಾನಾಧಿಕಾರಿಗಳು ರವರಿಗೆ ( ಆಯುಕ್ತರು. ಜ.ಅ.ಇ. ಇವರ ಮುಖಾಂತರ).
14. ಶಾಖಾ ರಕ್ಷ ಕಡತ/ ಹೆಚ್ಚುವರಿ ಪ್ರತಿಗಳು.

ಇವರಿಗೆ:-

1. ಮಾನ್ಯ ಕೃಷಿ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಕಾಸ ಸೌಧ, ಬೆಂಗಳೂರು
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ಕೃಷಿ ಇಲಾಖೆ, ಬೆಂಗಳೂರು
3. ಸರ್ಕಾರದ ಉಪ ಕಾರ್ಯದರ್ಶಿ 1 & 2, ಕೃಷಿ ಇಲಾಖೆ, ಇವರ ಆಪ್ತ ಶಾಖೆ.
4. ತಾಂತ್ರಿಕ ಅಧಿಕಾರಿಗಳು, ಕೃಷಿ ಯೋಜನಾ ಘಟಕ, ಎ ಮತ್ತು ಬಿ, ಕೃಷಿ ಇಲಾಖೆ.

**********